ಬೆಂಗಳೂರು ನಗರ ವಿಶ್ವವಿದ್ಯಾನಿಲಯ

ಆಗು ನೀ ಅನಿಕೇತನ
BE BOUNDLESS

BENGALURU CITY UNIVERSITY

Central College Campus, Dr. AmbedkarVeedhi, Bengaluru,
E-mail ID: registrarevlubcu@gmail.com, Ph.No: 080-22295559

ಸಂಖ್ಯೆ: ಬೆಂ.ನ.ವಿ/ಪ.ವಿ/2024-25 ದಿನಾಂಕ : 14.05.2024

# ಸುತ್ತೋಲೆ

**ವಿಷಯ:** ಜೂನ್/ಜುಲೈ-2024ರಲ್ಲಿ ನಡೆಯುವ 2, 4, 6 ಮತ್ತು 8ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಕಾಲೇಜುಗಳು ಸಿದ್ದತೆ ಮಾಡಿಕೊಳ್ಳುವ ಬಗ್ಗೆ.

*****

ಬೆಂಗಳೂರು ನಗರ ವಿಶ್ವವಿದ್ಯಾಲಯದ 2, 4, 6 ಮತ್ತು 8ನೇ ಸೆಮಿಸ್ಟರ್ ಸ್ನಾತಕ ಪರೀಕ್ಷೆಗಳು ಜೂನ್/ಜುಲೈ-2024 ರಲ್ಲಿ ನಡೆಯಲಿವೆ. ಈ ಪರೀಕ್ಷೆಗಳಿಗೆ ಸಂಭಂದಪಟ್ಟ ಕಾಲೇಜುಗಳು ನಿಗಧಿತ ಅವಧಿಯೊಳಗೆ ಆಂತರಿಕ ಅಂಕಗಳು, ಪ್ರಾಯೋಗಿಕ ಪರೀಕ್ಷೆಗಳು ಇತ್ಯಾದಿಗಳನ್ನು ನಡೆಸಿ, ವಿಶ್ವವಿದ್ಯಾಲಯ/UUCMS ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡಲು ತಿಳಿಸಲಾಗಿದೆ. ನಿಗಧಿಪಡಿಸಿದ ಅವಧಿಯಲ್ಲಿ ಮಾತ್ರ ಮೇಲೆ ತಿಳಿಸಿರುವ ಪರೀಕ್ಷೆಗಳ ಅಂಕಗಳನ್ನು ಪೋರ್ಟಲ್‌ಗಳಲ್ಲಿ ಅಪ್ಲೋಡ್ ಮಾಡಲು ಮತ್ತು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಅವಕಾಶ ಕೊಡುತ್ತದೆ. ನಂತರ ಯಾವುದೇ ಅಂಕಗಳನ್ನು ಸ್ವೀಕರಿಸುವುದಾಗಲೀ, ಅಪ್ಲೋಡ್ ಮಾಡಲು ಅನುಮತಿ ನೀಡುವುದಾಗಲೀ ಮತ್ತು ಅಂಕಗಳನ್ನು ಮಾರ್ಪಾಡು ಮಾಡಲು ಅವಕಾಶವಿರುವುದಿಲ್ಲ. ಆದುದ್ದರಿಂದ, ಆಂತರಿಕ ಹಾಗೂ ಪ್ರಾಯೋಗಿಕ ಅಂಕಗಳನ್ನು ಪೋರ್ಟಲ್‌ನಲ್ಲಿ ಅಪ್ಲೋಡ್ ಮಾಡುವ ಮೊದಲು ಕೂಲಂಕುಷವಾಗಿ ಪರಿಶೀಲಿಸಿ ಅಪ್ಲೋಡ್ ಮಾಡತಕ್ಕದ್ದು.

ಮೇಲೆ ತಿಳಿಸಿರುವ ಪರೀಕ್ಷೆಗಳಿಗೆ ಹಾಜರಾಗುವ ವಿದ್ಯಾರ್ಥಿಗಳ ಹಾಜರಾತಿ ಪ್ರವೇಶ ಅನುಮೋದನೆ ಇತ್ಯಾದಿಗಳನ್ನು ಎಲ್ಲಾ ಕಾಲೇಜುಗಳು ಸಕಾಲದಲ್ಲಿ ಪೂರೈಸಬೇಕೆಂದು ತಿಳಿಸುತ್ತಾ, ಹಾಜರಾತಿ ಕಡಿಮೆ ಇರುವ ಹಾಗೂ ಸಕಾಲದಲ್ಲಿ ಪರೀಕ್ಷಾ ಶುಲ್ಕ ಪಾವತಿಸದೇ ಇರುವ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯಕ್ಕೆ ಕಳುಹಿಸದೇ, ಪ್ರಾಂಶುಪಾಲರ ಮಟ್ಟದಲ್ಲಿ ವಿದ್ಯಾರ್ಥಿಗಳ ಕುಂದು ಕೊರತೆಗಳನ್ನು ಪರಿಹರಿಸಿವುದು ಆಯಾ ಕಾಲೇಜುಗಳ ಪ್ರಾಂಶುಪಾಲರುಗಳ ಜವಬ್ದಾರಿಯಾಗಿರುತ್ತದೆ. ಆದುದರಿಂದ, ಎಲ್ಲಾ ಕಾಲೇಜುಗಳ ಪ್ರಾಂಶುಪಾಲರುಗಳು ಮತ್ತು ವಿಶ್ವವಿದ್ಯಾಲಯದ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಪರೀಕ್ಷೆಗಳನ್ನು ಸಕಾಲದಲ್ಲಿ ಯಾವುದೇ ಗೊಂದಲವಿಲ್ಲದೆ ನಡೆಸಲು ಸಹಕರಿಸಬೇಕೆಂದು ಕೋರಲಾಗಿದೆ.

ಕುಲಸಚಿವರು (ಮೌಲ್ಯಮಾಪನ)

ಕುಲಸಚಿವರು (ಮೌಲ್ಯಮಾಪನ)
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಸೆಂಟ್ರಲ್ ಕಾಲೇಜು ಕ್ಯಾಂಪಸ್
ಬೆಂಗಳೂರು - 560 001

ಗೆ,

1. ಎಲ್ಲಾ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು.
2. ಕುಲಪತಿಯವರು/ಕುಲಸಚಿವರು (ಆ)/ ಕುಲಸಚಿವರು (ಮೌ)/ ಹಣಕಾಸು ಅಧಿಕಾರಿಗಳ ಆಪ್ತ ಶಾಖೆ, ಬೆಂ.ನ.ವಿ. ಬೆಂಗಳೂರು.
3 ವಿಶ್ವವಿದ್ಯಾಲಯ ವೆಬ್ಸೈಟ್ ನಿರ್ವಾಹಕರು, ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳುರು.